# ಸೈಕಲ್ ಪ್ಯೂರ್ ಸಂಸ್ಥೆಯ ಮೈಸೂರು ವಾರಿಯರ್ಸ್ ತಂಡ ಪ್ರಕಟಣೆ

ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ಅಗರಬತ್ತಿ ಉತ್ಪಾದನೆಯಲ್ಲಿ ವಿಶ್ವದ ಅತೀ ದೊಡ್ಡ ಸಂಸ್ಥೆಯಾಗಿದ್ದೂ, ಇದು ಮೈಸೂರಿನದ್ದೇ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತನ್ನ 20 ಮಂದಿ ತಂಡದಲ್ಲಿ 11 ಮಂದಿಯನ್ನು ಮೈಸೂರಿನ ಆಸುಪಾಸಿನ ಸ್ಥಳಗಳಿಂದಲೇ ಆಯ್ಕೆ ಮಾಡಲಾಗಿದೆ. ಮೈಸೂರು ಮೂಲದ ಎನ್.ಆರ್.ಗ್ರೂಪ್ ಅನ್ನು 1948ರಲ್ಲಿ ಎನ್.ರಂಗರಾವ್ ಅವರು ಸ್ಥಾಪಿಸಿದರು. ಚಿಂತಕರು, ಭವಿಷ್ಯದ ಬಗೆಗೆ ತಮ್ಮದೇ ಧ್ಯೇಯ ಹೊಂದಿದ್ದ ಅವರು ಸೈಕಲ್ ಪ್ಯೂರ್ ಅಗರಬತ್ತಿ ಉತ್ಪಾದನೆ ಆರಂಭಿಸಿದ್ದು, ಇಂದು ವಿಶ್ವದಲ್ಲೇ ಅತಿ ಹೆಚ್ಚಾಗಿ ಮಾರಾಟವಾಗುವ ಅಗರಬತ್ತಿ ಆಗಿದೆ. ಗೃಹ ಕೈಗಾರಿಕೆಯಾಗಿ ಆರಂಭವಾದ ಎನ್.ಆರ್.ಗ್ರೂಪ್ ಇಂದು ಅತಿ ದೊಡ್ಡ ಕಂಪನಿಯಾಗಿ ರೂಪುಗೊಂಡಿದೆ. ದೇಶದ ವಿವಿಧೆಡೆ ವಿದೇಶಗಳಲ್ಲಿ ಅಸ್ತಿತ್ವ ಹೊಂದಿದೆ. ಸಮೂಹವು ಇಂದು ವಿವಿಧ ವಹಿವಾಟು ಹೊಂದಿದೆ. ಇದರಲ್ಲಿ ಸುಗಂಧ ದ್ರವ್ಯಗಳು (ಲಿಯಾ ಬ್ರಾಂಡ್‌ನ ರೂಂ ಫ್ರೆಷ್‌ನರ್ಸ್, ಕಾರ್ ಫ್ರೆಷ್‌ನರ್ಸ್), ವೆಲ್‌ನೆಸ್ ಹೋಂ ಸುವಾಸನೆಯುಕ್ತ ಉತ್ಪನ್ನಗಳು, ರಿಪ್ಪಲ್ ಫ್ರಾಗನ್ಸ್, ಫ್ಲೋರಲ್ ಎಕ್ಸ್ಟ್ರಾಸ್, ರಂಗಸನ್ಸ್ ಎಲೆಕ್ಟ್ರಾನಿಕ್ಸ್ ಸೇರಿದೆ. ಈ ಎಲ್ಲಾ ಸಮೂಹವು ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆಗೂ ಬದ್ಧವಾಗಿದ್ದು, ಎನ್.ಆರ್.ಫೌಂಡೇಶನ್ ಮೂಲಕ ಇದನ್ನು ನಿಭಾಯಿಸುತ್ತಿದೆ. ಎನ್.ಆರ್ ಗ್ರೂಪ್ ಅನ್ನು ಇಂದು ಕುಟುಂಬದ 3ನೇ ಪೀಳಿಗೆಯು ಮೇಲ್ವಿಚಾರಣೆ ಮಾಡುತ್ತಿದೆ.

**ಮೈಸೂರು ವಾರಿಯರ್ಸ್ ತಂಡದ ಸದಸ್ಯರ ಹೆಸರು:**

ಅಮಿತ್ ವರ್ಮಾ, ಮನಿಶ್ ಪಾಂಡೆ, ಶಿಶಿರ್ ಭವಾನೆ, ಕೆ.ಬಿ.ಪವನ್, ಸುಚಿತ್, ಸಾದಿಕ್ ಕೀರ್ಮಾನಿ(ವಿಕೆಟ್ ಕೀಪರ್), ಆದಿತ್ಯ ಸಾಗರ್, ಯರೇಗೌಡ, ಎಂ.ಬಿ.ದರ್ಶನ್, ರಾಜು ಭಟ್ಕಳ್, ಮಂಜುನಾಥ್.ಎಸ್.ಪಿ, ಮಂಜೇಶ್ ರೆಡ್ಡಿ, ಅಬ್ದುಲ್ ಮಜೀದ್, ವೈಶಾಕ್ ವಿಜಯ್ ಕುಮಾರ್, ಸೋಮಶೇಖರ್, ಶಶಿ ಶೇಖರ್, ಸುನೀಲ್ ಕುಮಾರ್ ಸೇರಿದಂತೆ ಇನ್ನಿತರರಿದ್ದಾರೆ.